## 2020 ಕ.ತೀ.ವ 1065

(ಕಲಬುರಗಿ ಪೀಠ)

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಕೆ.ಎಸ್. ಮುದಗಲ್

## ಅರುಣ್ –ವಿರುದ್ಧ– ಕರ್ನಾಟಕ ರಾಜ್ಯ*

ದಂಡ ಪ್ರಕ್ರಿಯಾ ಸಂಹಿತೆಯ 401ನೇ ಪ್ರಕರಣದೊಂದಿಗೆ ಓದಲಾಗುವ 397ನೇ ಪ್ರಕರಣದ ಅಡಿಯಲ್ಲಿನ ಕ್ರಿಮಿನಲ್ ಪರಿಷ್ಕರಣಾ ಅರ್ಜಿ.

ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣೆ ಅಧಿನಿಯಮ, 2012ರ (ಪೋಕ್ಸೊ) ಅಧಿನಿಯಮದ 6ನೇ ಮತ್ತು 15ನೇ ಪ್ರಕರಣದೊಂದಿಗೆ ಓದಲಾಗುವ ಭಾರತ ದಂಡ ಸಂಹಿತೆಯ 363(ಡಿ) ಮತ್ತು 15ನೇ ಪ್ರಕರಣದ ಅಡಿಯಲ್ಲಿ ಅರ್ಜಿದಾರ ಮತ್ತು ಇನ್ನಿತರ ನಾಲ್ಕು ಜನರ ವಿರುದ್ಧ ದಾಖಲಾದ ಕ್ರಿಮಿನಲ್ ಮೊಕದ್ದಮೆಯಲ್ಲಿ ಅರ್ಜಿದಾರರು ಹೂಡಿದ ಜಾಮೀನು ಅರ್ಜಿಯನ್ನು ತಿರಸ್ಕರಿಸಿದ ಎರಡು ವಿಚಾರಣಾ ನ್ಯಾಯಾಲಯಗಳ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ಪರಿಷ್ಕರಣಾ ಅರ್ಜಿಯನ್ನು ಸಲ್ಲಿಸಲಾಗಿದೆ.

ಅರ್ಜಿದಾರನು ಈಗಾಗಲೇ ಅಪರಾಧಿಯೊಂದಿಗೆ ಸಂಬಂಧ ಹೊಂದಿದ್ದು, ಆತನು 15 ವರ್ಷದ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿರುವುದಲ್ಲದೆ, ಅದನ್ನು ಚಿತ್ರೀಕರಿಸಿದ್ದಾನೆ. ಈ ಕೃತ್ಯವು ವ್ಯಕ್ತಿಗತವಾಗಿ ಆಕೆಯ ವಿರುದ್ಧ ಮಾತ್ರವಾಗಿರದೆ, ಇಡೀ ಸಮಾಜದ ವಿರುದ್ಧ ಮಾಡಿದ ಅಪರಾಧವೆನಿಸುತ್ತದೆಂದು ಹಾಗೂ ಅಧೀನ ನ್ಯಾಯಾಲಯಗಳ ಆದೇಶ ಕ್ರಮದಲ್ಲಿ ಯಾವುದೇ ದೋಷವಿಲ್ಲವೆಂದು ಉಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟು, ಸದರಿ ಪರಿಷ್ಕರಣಾ ಅರ್ಜಿಯನ್ನು ವಜಾಗೊಳಿಸಿದೆ.

*ಕ್ರಿಮಿನಲ್ ಪರಿಷ್ಕರಣಾ ಅರ್ಜಿ ಸಂಖ್ಯೆ: 200054/2019, ದಿನಾಂಕ 12ನೇ ಸೆಪ್ಟೆಂಬರ್, 2019.

**ಉಲ್ಲೇಖಿಸಲಾದ ಮೊಕದ್ದಮೆಗಳು** **ಪ್ಯಾರಾಗಳಲ್ಲಿ**

1. *2017 (3) ಕೆಎಲ್‌ಜೆ 330*
   *ಕರಣ್ –ವಿರುದ್ಧ– ರಾಜ್ಯ, ರತ್ಕಲ್ ಪೊಲೀಸ್ ಠಾಣೆ,*
   *ಕಲಬುರಗಿ ಜಿಲ್ಲೆ ಮುಖಾಂತರ* *(ಉಲ್ಲೇ) 7*
2. *ಕ್ರಿಮಿನಲ್ ಪರಿಷ್ಕರಣೆ ಅರ್ಜಿ ಸಂಖ್ಯೆ: 200065/2017*
   *ಡಿ.ಡಿ. 06.07.2017*
   *ಮೋಹಿತ್ ಮತ್ತು ಇತರರು –ವಿರುದ್ಧ–*
   *ಕರ್ನಾಟಕ ರಾಜ್ಯ* *(ಉಲ್ಲೇ) 7*
3. *ಕ್ರಿಮಿನಲ್ ಅರ್ಜಿ ಸಂಖ್ಯೆ: 4505/2018, ಡಿ.ಡಿ. 30.07.2018*
   *ಅಜಿತ್ –ವಿರುದ್ಧ– ಪೊಲೀಸ್ ಉಪ–ನಿರೀಕ್ಷಕರು,*
   *ವಿನೋಭಾನಗರ ಪೊಲೀಸ್ ಠಾಣೆ,*
   *ಶಿವಮೊಗ್ಗ ಮತ್ತು ಇನ್ನೊಬ್ಬರು* *(ಉಲ್ಲೇ) 7*
4. *ಕ್ರಿಮಿನಲ್ ಪರಿಷ್ಕರಣೆ ಅರ್ಜಿ ಸಂಖ್ಯೆ: 1340/2015*
   *ಮುಖೇಶ್ –ವಿರುದ್ಧ– ಉತ್ತರ ಪ್ರದೇಶ ರಾಜ್ಯ*
   *ಮತ್ತು ಇನ್ನೊಬ್ಬರು, ಅಲಹಾಬಾದ್ ಉಚ್ಚ ನ್ಯಾಯಾಲಯ (ಉಲ್ಲೇ) 7*
5. *ಕ್ರಿಮಿನಲ್ ಪರಿಷ್ಕರಣೆ ಅರ್ಜಿ ಸಂಖ್ಯೆ 2492/2017*
   *ದಿನಾಂಕ: 03.07.2018*
   *ರಾಜು ಅಲಿಯಾಸ್ ಆಶಿಷ್ –ವಿರುದ್ಧ–*
   *ಉತ್ತರ ಪ್ರದೇಶ ರಾಜ್ಯ, ಅಲಹಾಬಾದ್*
   *ಉಚ್ಚ ನ್ಯಾಯಾಲಯ* *(ಉಲ್ಲೇ) 9*
6. *ಕ್ರಿಮಿನಲ್ ಅಪೀಲು ಸಂಖ್ಯೆ" 651/2012*
   *ದಿನಾಂಕ: 13.04.2012 (ಎಸ್‌ಸಿ)*
   *ಓಮ್ ಪ್ರಕಾಶ್ –ವಿರುದ್ಧ– ರಾಜಸ್ಥಾನ ರಾಜ್ಯ*
   *ಮತ್ತು ಇನ್ನೊಬ್ಬರು* *(ಉಲ್ಲೇ) 9*

ಅರ್ಜಿದಾರನ ಪರ : ಶ್ರೀ ಎಸ್. ಎಸ್. ಮಮದಾಪುರ, ನ್ಯಾಯವಾದಿ.
ಪ್ರತ್ಯರ್ಜಿದಾರರ ಪರ : ಶ್ರೀ ಮಲ್ಲಿಕಾರ್ಜುನ ಸಾಹುಕಾರ್, ಉಚ್ಚ ನ್ಯಾಯಾಲಯದ ಸರ್ಕಾರಿ ಪ್ಲೀಡರ್.

## ಆದೇಶ

**ನ್ಯಾಯಮೂರ್ತಿ ಶ್ರೀಮತಿ ಕೆ.ಎಸ್. ಮುದಗಲ್:**

ಅರ್ಜಿದಾರನ ಜಾಮೀನು ಅರ್ಜಿಯನ್ನು ತಿರಸ್ಕರಿಸಿರುವ ಕೊಲ್ಹಾರ್ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ: 23/2019ರಲ್ಲಿ ದಿನಾಂಕ: 13.05.2019ರಂದು ಬಾಲ ನ್ಯಾಯ ಮಂಡಳಿಯು ಹೊರಡಿಸಿದ ಪ್ರಶ್ನಿತ ಆದೇಶ ಹಾಗೂ ಕ್ರಿಮಿನಲ್ ಅಪೀಲು ಸಂಖ್ಯೆ: 37/2019ರಲ್ಲಿ ಅದನ್ನು ಸ್ಥಿರೀಕರಿಸಿರುವ ಸತ್ರ ನ್ಯಾಯಾಲಯದ ಆದೇಶವು ಯಾವುದೇ ಅಸ್ಥಿರತೆ ಮತ್ತು ಅಕ್ರಮತೆಯಿಂದ ಕೂಡಿದೆಯೆ?" ಎಂಬುದು ಈ ಮೊಕದ್ದಮೆಯು ಒಳಗೊಂಡಿರುವ ಪ್ರಶ್ನೆಯಾಗಿದೆ.

2. ಅರ್ಜಿದಾರನು ಕೊಲ್ಹಾರ್ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ: 23/2019ರಲ್ಲಿ ಆರೋಪಿ ಸಂಖ್ಯೆ: 5 ಆಗಿದ್ದನು. 15 ವರ್ಷ ವಯಸ್ಸಿನ 'ಎಕ್ಸ್' ಎಂಬಾಕೆಯ (ಗೋಪ್ಯತೆಯ ಉದ್ದೇಶಕ್ಕಾಗಿ ಅಪರಾಧಕ್ಕೆ ಗುರಿಯಾದ ವ್ಯಕ್ತಿಯನ್ನು ಇದರಲ್ಲಿ ಇನ್ನು ಮುಂದೆ 'ಎಕ್ಸ್' ಎಂದು ಉಲ್ಲೇಖಿಸಲಾಗುವುದು) ದೂರಿನ ಮೇರೆಗೆ ಅರ್ಜಿದಾರ ಮತ್ತು ಇತರ ನಾಲ್ವರ ವಿರುದ್ಧ ಭಾರತದ ದಂಡ ಸಂಹಿತೆಯ 363, 376(ಡಿ), 506ನೇ ಪ್ರಕರಣಗಳ ಮೇರೆಗೆ ಹಾಗೂ ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣೆ ಅಧಿನಿಯಮ, 2012ರ (ಸಂಕ್ಷಿಪ್ತವಾಗಿ 'ಪೋಕ್ಸೊ ಅಧಿನಿಯಮ') 6ನೇ ಮತ್ತು 15ನೇ ಪ್ರಕರಣಗಳೊಂದಿಗೆ ಓದಲಾಗುವ 5(ಜಿ) ಪ್ರಕರಣದ ಮೇರೆಗೆ ಹಾಗೂ ಮಾಹಿತಿ ತಂತ್ರಜ್ಞಾನ ಅಧಿನಿಯಮದ 66(ಎ) ಪ್ರಕರಣದ ಮೇರೆಗೆ ದಂಡನಾರ್ಹ ಅಪರಾಧಗಳಿಗಾಗಿ ಸದರಿ ಮೊಕದ್ದಮೆಯನ್ನು ನೋಂದಾಯಿಸಲಾಗಿತ್ತು.

3. ಪ್ರಾಸಿಕ್ಯೂಷನ್ ಮೊಕದ್ದಮೆಯು ಸಂಕ್ಷಿಪ್ತವಾಗಿ ಈ ಕೆಳಗಿನಂತಿದೆ:

22 ವರ್ಷ ವಯಸ್ಸಿನ 1ನೇ ಆರೋಪಿಯು ವೃತ್ತಿಯಲ್ಲಿ ವಾಹನ ಚಾಲಕನಾಗಿದ್ದನು. ಸಂತ್ರಸ್ತೆಯ ಪಾಲಕರು ಪಾತ್ರೆಪಗಡಿಗಳನ್ನು ಮಾರಾಟ ಮಾಡುತ್ತಿದ್ದ ಬೀದಿ ವ್ಯಾಪಾರಿಗಳಾಗಿರುವರು. 'ಎಕ್ಸ್' ಕುಟುಂಬಕ್ಕೆ ಹಾಗೂ 2ರಿಂದ 5ರವರೆಗಿನ ಆರೋಪಿಗಳಿಗೆ 1ನೆಯ ಆರೋಪಿಯು ಪರಿಚಿತನಾಗಿದ್ದನು. 2ರಿಂದ 5ರವರೆಗಿನ ಆರೋಪಿಗಳೆಲ್ಲಾ ಬಾಲಕರಾಗಿದ್ದು 17 ವರ್ಷ ವಯಸ್ಸಿನವರಾಗಿದ್ದಾರೆ. ದಿನಾಂಕ: 16.04.2019ರಂದು ಆರೋಪಿಯು ಸಂತ್ರಸ್ತ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಲು ಸಂಚು ಮಾಡಿದ್ದನು. ಈ ಸಂಚನ್ನು ಕಾರ್ಯಗತಗೊಳಿಸಲು, 1ನೇ ಆರೋಪಿಯು, ಸಂಖ್ಯೆ: ಕೆಎ/28–6643ನ್ನು ಹೊಂದಿರುವ ತನ್ನ ಸರಕು ವಾಹನಕ್ಕೆ ಪಾತ್ರೆಪಗಡಿಗಳನ್ನು ಹೇರಲು ಆಕೆಯನ್ನು ಕರೆತರುವಂತೆ ಆಕೆಯ ಪೋಷಕರು ಆತನಿಗೆ ತಿಳಿಸಿದ್ದಾರೆ ಎಂದು ಹೇಳಿ ಆಕೆಯು ಆತನ ವಾಹನವನ್ನು ಹತ್ತುವಂತೆ ಮಾಡಲು ಉಪಾಯ ಹೂಡಿ ಹತ್ತಿಸಿಕೊಂಡನು. ದಾರಿಯಲ್ಲಿ, ಇತರ ಆರೋಪಿಗಳು ವಾಹನಕ್ಕೆ ಹತ್ತಿಕೊಂಡರು. ನಂತರ ಅವರೆಲ್ಲರೂ ಆಕೆಯನ್ನು ಹಳೆ ಕೊಲ್ಹಾರ್ ಗ್ರಾಮದಲ್ಲಿರುವ ಪಂಪ್ ಹೌಸ್ ಬಳಿ ಕರೆತಂದು, ಅವರೆಲ್ಲರೂ ಅವಳಿಗೆ ಜೀವ ಬೆದರಿಕೆ ಒಡ್ಡಿ ನಿರ್ಜನ ಒಣಗಿದ ಬಾವಿಯಲ್ಲಿ ಆಕೆಯ ಮೇಲೆ ಸಾಮೂಹಿಕವಾಗಿ ಅತ್ಯಾಚಾರ ಎಸಗಿದ್ದಾರೆ. ನಾಲ್ಕನೇ ಆರೋಪಿಯು ಸಂತ್ರಸ್ತ ಬಾಲಕಿಯ ಮೇಲೆ ಅರ್ಜಿದಾರನು ಅತ್ಯಾಚಾರ ಮಾಡುತ್ತಿದ್ದ ದೃಶ್ಯವನ್ನು ವಿಡಿಯೋಗ್ರಾಫ್ ಮಾಡಿದ್ದಾನೆ. ನಂತರ, ಎಲ್ಲಾ ಆರೋಪಿಗಳು ಘಟನೆ ಕುರಿತು ಆಕೆ ಯಾರಿಗಾದರೂ ತಿಳಿಸಿದರೆ, ಆಕೆಯನ್ನು ಕೊಲ್ಲುವುದಾಗಿ ಬೆದರಿಸಿ ಸ್ಥಳವನ್ನು ತೊರೆದಿದ್ದಾರೆ.

4. ಅರ್ಜಿದಾರನನ್ನು ದಸ್ತಗಿರಿ ಮಾಡಲಾಯಿತು. ವಿಜಯಪುರದ ಬಾಲ ನ್ಯಾಯ ಮಂಡಳಿಯ ಮುಂದೆ ಆತನು ಜಾಮೀನು ಅರ್ಜಿಯನ್ನು ಸಲ್ಲಿಸಿದನು. ಮಂಡಳಿಯು ಪ್ರಶ್ನಿತ ಆದೇಶದ ಮೂಲಕ ಆತನ ಜಾಮೀನು ಅರ್ಜಿಯನ್ನು ತಿರಸ್ಕರಿಸಿ, ಈ ಕೆಳಗೆ ಹೇಳಿದ ಕಾರಣಗಳ ಮೇರೆಗೆ ಆತನನ್ನು ಪರಿವೀಕ್ಷಣಾಲಯದಲ್ಲಿರಿಸಲು ನಿರ್ದೇಶಿಸಿತು:

i) ಕಾನೂನಿನೊಂದಿಗೆ ಸಂಘರ್ಷ ಹೊಂದಿರುವ ಮಗುವಿನ ಕುಟುಂಬದ ಪ್ರಸ್ತುತ ಪರಿಸ್ಥಿತಿಯನ್ನು ಪರಿವೀಕ್ಷಣಾಧಿಕಾರಿಯ ತನಿಖಾ ವರದಿಯಲ್ಲಿ ಸೂಚಿಸಿರುವುದಿಲ್ಲ ಮತ್ತು ಆತನು ಓದುತ್ತಿದ್ದಾನೆ;

ii) ಅಪರಾಧದ ಸ್ವರೂಪವನ್ನು ಗಮನಿಸಿದಲ್ಲಿ, ಆತನಿಗೆ ಜಾಮೀನು ನೀಡಿದರೆ, ಅದು ಸಮಾಜದ ಅನೈತಿಕತೆಗೆ ದಾರಿ ಮಾಡಿಕೊಡುವುದು ಮತ್ತು ನ್ಯಾಯದ ಉದ್ದೇಶವನ್ನು ವಿಫಲಗೊಳಿಸುವುದು.

5. ಬಾಲ ನ್ಯಾಯ ಮಂಡಳಿಯ ನಿರ್ಣಯಗಳೊಂದಿಗೆ ಸತ್ರ ನ್ಯಾಯಾಧೀಶರು ಸಹಮತಿ ವ್ಯಕ್ತಪಡಿಸಿ, ಅರ್ಜಿದಾರನ ಮೇಲೆ ಇರುವ ಕಳಂಕವನ್ನು ಗಮನಕ್ಕೆ ತೆಗೆದುಕೊಂಡು, ಆತನಿಗೆ ಜಾಮೀನು ನೀಡಿದರೆ, ಆತನು ಸಮಾಜದಲ್ಲಿ ಅಪಾಯವನ್ನು ಎದುರಿಸಬೇಕಾಗಬಹುದು ಮತ್ತು ನ್ಯಾಯದ ಹಿತಾಸಕ್ತಿಯಲ್ಲಿ ಆತನನ್ನು ಪರಿವೀಕ್ಷಣಾಲಯದಲ್ಲಿ ಇರಿಸತಕ್ಕದ್ದು ಎಂದು ನಿರ್ಣಯಿಸಿದ್ದಾರೆ. ಇದಲ್ಲದೆ, ಜಾಮೀನು ನೀಡುವುದು ಅರ್ಜಿದಾರನನ್ನು ಯಾರೇ ಗೊತ್ತಿರುವ ಅಪರಾಧಿಗಳ ಸಂಪರ್ಕಕ್ಕೆ ತರಬಹುದು ಮತ್ತು ಆತನನ್ನು ನೈತಿಕ, ದೈಹಿಕ ಮತ್ತು ಮಾನಸಿಕ ಅಪಾಯಕ್ಕೆ ಗುರಿ ಮಾಡಬಹುದು ಎಂದು ನಿರ್ಣಯಿಸಲಾಯಿತು.

6. ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳು, ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ಅಧಿನಿಯಮ, 2015ರ 3ನೇ ಮತ್ತು 12ನೇ ಪ್ರಕರಣಗಳನ್ನು ಆಧರಿಸಿ, ಅಪರಾಧದ ತೀವ್ರತೆಯು ಬಾಲಕನ ಜಾಮೀನನ್ನು ಪರಿಗಣಿಸುವಲ್ಲಿ ಅಪ್ರಸ್ತುತವಾಗಿರುವುದರಿಂದ, ವಿಚಾರಣಾ ನ್ಯಾಯಾಲಯದ ಪ್ರಶ್ನಿತ ಆದೇಶವು ತಳ್ಳಿಹಾಕಲು ಯೋಗ್ಯವಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ.

7. ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳು, ತಮ್ಮ ವಾದಗಳಿಗೆ ಸಮರ್ಥನೆಯಾಗಿ ಈ ಮುಂದಿನ ತೀರ್ಪುಗಳನ್ನು ಅವಲಂಬಿಸಿದ್ದಾರೆ:

i) ***ಕರಣ್ –ವಿರುದ್ಧ– ರಾಜ್ಯ, ರತ್ಕಲ್ ಪೋಲೀಸ್ ಠಾಣೆ, ಕಲಬುರಗಿ ಜಿಲ್ಲೆ ಮುಖಾಂತರ***[1];

ii) ***ಮೋಹಿತ್ ಮತ್ತು ಇತರರು –ವಿರುದ್ಧ– ಕರ್ನಾಟಕ ರಾಜ್ಯ***[2], (ವರದಿಯಾಗಿಲ್ಲ)

iii) ***ಅಜಿತ್ –ವಿರುದ್ಧ– ಪೋಲೀಸ್ ಉಪ–ನಿರೀಕ್ಷಕರು, ವಿನೋಭಾನಗರ ಪೋಲೀಸ್ ಠಾಣೆ, ಶಿವಮೊಗ್ಗ ಮತ್ತು ಇನ್ನೊಬ್ಬರು***[3] ಮತ್ತು

iv) ***ಮುಖೇಶ್ –ವಿರುದ್ಧ– ಉತ್ತರ ಪ್ರದೇಶ ರಾಜ್ಯ ಮತ್ತು ಇನ್ನೊಬ್ಬರು, ಅಲಹಾಬಾದ್ ಉಚ್ಚ ನ್ಯಾಯಾಲಯ***[4].

8. ಇದಕ್ಕೆ ತದ್ವಿರುದ್ಧವಾಗಿ, ವಿಚಾರಣಾ ನ್ಯಾಯಾಲಯಗಳು ಅರ್ಜಿಯನ್ನು ತಳ್ಳಿಹಾಕುವುದಕ್ಕೆ ಅಪರಾಧದ ತೀವ್ರತೆಯೇ ಏಕೈಕ ಕಾರಣವಾಗಿರಲಿಲ್ಲ ಮತ್ತು ಅಧಿನಿಯಮದ 12ನೇ ಪ್ರಕರಣದ ಅಡಿಯಲ್ಲಿ ಪರ್ಯಾಲೋಚಿಸಿದ ಇತರ ಅಂಶಗಳನ್ನು ಸಹ ಪರಿಗಣಿಸಲಾಗಿತ್ತು ಎಂದು ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪ್ಲೀಡರ್ ನಿವೇದಿಸಿಕೊಂಡಿದ್ದಾರೆ. ಇದಲ್ಲದೆ ಅವರು, ಅಪರಾಧದ ಸ್ವರೂಪವನ್ನು ಗಮನದಲ್ಲಿರಿಸಿಕೊಂಡು, ಜಾಮೀನಿನ ಮೇಲೆ ಅರ್ಜಿದಾರನ ಬಿಡುಗಡೆಯು ನ್ಯಾಯದ ಉದ್ದೇಶವನ್ನು ವಿಫಲಗೊಳಿಸುತ್ತದೆ ಎಂದು ವಿಚಾರಣಾ ನ್ಯಾಯಾಲಯಗಳು ನಿರ್ಣಯಿಸಿರುವುದು ಸರಿಯಾಗಿಯೇ ಇದೆ ಎಂದು ನಿವೇದಿಸಿಕೊಂಡಿದ್ದಾರೆ.

9. ತಮ್ಮ ವಾದಗಳಿಗೆ ಬೆಂಬಲವಾಗಿ, ಅವರು ಈ ಮುಂದಿನ ತೀರ್ಪುಗಳನ್ನು ಅವಲಂಬಿಸಿದ್ದಾರೆ:

---

1. 2017 (3) ಕೆಎಲ್‌ಜೆ 330
2. ಕ್ರಿಮಿನಲ್ ಪರಿಷ್ಕರಣೆ ಅರ್ಜಿ ಸಂಖ್ಯೆ: 200065/2017 – ದಿನಾಂಕ: 06.07.2017
3. ಕ್ರಿಮಿನಲ್ ಅರ್ಜಿ ಸಂಖ್ಯೆ: 4505/2018, ದಿನಾಂಕ: 30.07.2018
4. ಕ್ರಿಮಿನಲ್ ಪರಿಷ್ಕರಣೆ ಅರ್ಜಿ ಸಂಖ್ಯೆ: 1340/2015

i) ***ರಾಜು ಅಲಿಯಾಸ್ ಆಶಿಷ್ –ವಿರುದ್ಧ– ಉತ್ತರ ಪ್ರದೇಶ ರಾಜ್ಯ, ಅಲಹಾಬಾದ್ ಉಚ್ಚ ನ್ಯಾಯಾಲಯ***[5]; ಮತ್ತು (ವರದಿಯಾಗಿಲ್ಲ)

ii) ***ಓಮ್ ಪ್ರಕಾಶ್ –ವಿರುದ್ಧ– ರಾಜಸ್ಥಾನ ರಾಜ್ಯ ಮತ್ತು ಇನ್ನೊಬ್ಬರು***[6].

10. ಈ ಮೊಕದ್ದಮೆಯ ಉದ್ದೇಶಕ್ಕೆ ಸುಸಂಗತವಾಗಿರುವ ಅಧಿನಿಯಮದ 12(1) ಮತ್ತು (3)ನೇ ಪ್ರಕರಣಗಳನ್ನು ಈ ಕೆಳಗಿನಂತೆ ಓದಲಾಗಿದೆ:–

> **"ಕಾನೂನಿನೊಂದಿಗೆ ಸಂಘರ್ಷ ಹೊಂದಿರುವನೆಂದು ಆರೋಪಿತನಾಗಿರುವ ಸ್ಪಷ್ಟವಾಗಿ ಬಾಲಕನಾಗಿರುವ ವ್ಯಕ್ತಿಗೆ ಜಾಮೀನು.–**
>
> (1) ಸ್ಪಷ್ಟವಾಗಿ ಬಾಲಕನಾಗಿದ್ದು, ಜಾಮೀನೀಯ ಅಥವಾ ಜಾಮೀನುರಹಿತ ಅಪರಾಧವನ್ನು ಎಸಗಿದ್ದಾನೆಂದು ಆರೋಪಿತನಾಗಿರುವ ಯಾರೇ ವ್ಯಕ್ತಿಯನ್ನು, ಪೊಲೀಸರು ದಸ್ತಗಿರಿ ಮಾಡಿದಾಗ ಅಥವಾ ಬಂಧಿಸಿದಾಗ ಅಥವಾ ಮಂಡಳಿಯ ಮುಂದೆ ಹಾಜರುಪಡಿಸಿದಾಗ ಅಥವಾ ತಂದಾಗ, ಅಂಥ ವ್ಯಕ್ತಿಯನ್ನು, **ದಂಡ ಪ್ರಕ್ರಿಯಾ ಸಂಹಿತೆ, 1973ರಲ್ಲಿ (1974ರ 2) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ,** ಭದ್ರತೆಯೊಂದಿಗೆ ಅಥವಾ ಭದ್ರತೆ ಇಲ್ಲದೆ **ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದು** ಅಥವಾ ಪ್ರೊಬೇಷನ್ ಅಧಿಕಾರಿಯ ಅಥವಾ ಯಾರೇ ಇತರ ಸೂಕ್ತ ವ್ಯಕ್ತಿಯ ಮೇಲ್ವಿಚಾರಣೆಯಲ್ಲಿರಿಸತಕ್ಕದ್ದು;

5. ಕ್ರಿಮಿನಲ್ ಪರಿಷ್ಕರಣೆ ಅರ್ಜಿ ಸಂಖ್ಯೆ 2492/2017, ದಿನಾಂಕ: 03.07.2018
6. ಕ್ರಿಮಿನಲ್ ಅಪೀಲು ಸಂಖ್ಯೆ" 651/2012 ದಿನಾಂಕ: 13.04.2012 (ಎಸ್‌ಸಿ)

ಪರಂತು, ಅಂಥ ಬಿಡುಗಡೆಯು, ಆ **ವ್ಯಕ್ತಿಯು ಯಾರೇ ಗೊತ್ತಿರುವ ಅಪರಾಧಿಯ ಸಹವಾಸ ಮಾಡುವ ಅಥವಾ ಅಂಥ ವ್ಯಕ್ತಿಯನ್ನು ನೈತಿಕ, ದೈಹಿಕ ಅಥವಾ ಮಾನಸಿಕ ಅಪಾಯಕ್ಕೀಡು ಮಾಡುವ ಸಂಭವವಿದೆ** ಎಂದು **ಅಥವಾ ಆ ವ್ಯಕ್ತಿಯ ಬಿಡುಗಡೆಯು ನ್ಯಾಯದ ಉದ್ದೇಶಗಳನ್ನು ವಿಫಲಗೊಳಿಸುವುದು** ಎಂದು ನಂಬಲು ಸೂಕ್ತ ಕಾರಣಗಳು ಕಂಡುಬಂದರೆ, **ಅಂಥ ವ್ಯಕ್ತಿಯುನ್ನು ಹಾಗೆ ಬಿಡುಗಡೆ ಮಾಡತಕ್ಕದ್ದಲ್ಲ** ಹಾಗೂ ಮಂಡಳಿಯು ಜಾಮೀನನ್ನು ನಿರಾಕರಿಸಲು ಕಾರಣಗಳನ್ನು ಮತ್ತು ಅಂಥ ನಿರ್ಣಯಕ್ಕೆ ಬಂದಂಥ ಸಂದರ್ಭಗಳನ್ನು ದಾಖಲಿಸತಕ್ಕದ್ದು.

(2) xxxxx

(3) **ಮಂಡಳಿಯು (1)ನೇ ಉಪ-ಪ್ರಕರಣದ ಮೇರೆಗೆ ಜಾಮೀನಿನ ಮೇಲೆ ಅಂಥ ವ್ಯಕ್ತಿಯನ್ನು ಬಿಡುಗಡೆ ಮಾಡದೇ ಇದ್ದಾಗ,** ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಆ ವ್ಯಕ್ತಿಗೆ ಸಂಬಂಧಿಸಿದ ವಿಚಾರಣೆ ಇತ್ಯರ್ಥದಲ್ಲಿರುವ ಅಂಥ ಕಾಲಾವಧಿಯವರೆಗೆ, ಆತನನ್ನು ಪರಿವೀಕ್ಷಣಾಲಯಕ್ಕೆ ಕಳುಹಿಸಿ ಅಥವಾ ಸಂದರ್ಭಾನುಸಾರ ಸುರಕ್ಷತೆಯ ಸ್ಥಳದಲ್ಲಿರಿಸಿ ಆದೇಶವನ್ನು ಹೊರಡಿಸತಕ್ಕದ್ದು.

11. ಮೇಲಿನ ಉಪಬಂಧಗಳ ಅವಲೋಕನದಿಂದ, ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ಏನೇ ಇದ್ದರೂ, ಬಾಲಕನಿಗೆ ಜಾಮೀನನ್ನು ನೀಡಬೇಕೆಂಬುದನ್ನು ನಿಸ್ಸಂದೇಹವಾಗಿ ಸ್ಪಷ್ಟಪಡಿಸುತ್ತದೆ. ಅದರರ್ಥ, ದಂಡ ಪ್ರಕ್ರಿಯಾ ಸಂಹಿತೆಯ 439ನೇ ಪ್ರಕರಣದ ಅಥವಾ 437ನೇ ಪ್ರಕರಣದ ಅಡಿಯಲ್ಲಿನ ಜಾಮೀನು ಅರ್ಜಿಗಳನ್ನು ಪರಿಗಣಿಸುವಾಗ, ನ್ಯಾಯಾಲಯಕ್ಕೆ ಸಂಗತಿಗಳು ಮುಖ್ಯವೆಂದು ಕಂಡುಬರಬೇಕು.

ಆ ಉಪಬಂಧಗಳ ಅಡಿಯಲ್ಲಿ ಪರಿಗಣಿಸಬೇಕಾದ ಒಂದು ಸಂಗತಿಯೆಂದರೆ ಅಪರಾಧದ ತೀವ್ರತೆ.

12. ಅದೇನೆ ಇರಲಿ, ಅಧಿನಿಯಮದ 12ನೇ ಪ್ರಕರಣದ ಪರಂತುಕವು ಈ ಮುಂದಿನ ಸಂದರ್ಭಗಳ ಮೇರೆಗೆ ಜಾಮೀನಿನ ನಿರಾಕರಣೆಗೆ ಉಪಬಂಧ ಕಲ್ಪಿಸುತ್ತದೆ:–

> "i) ಆತನ ಬಿಡುಗಡೆಯಿಂದ, ಆತನು ತನಗೆ ಗೊತ್ತಿರುವ ಯಾರೇ ಅಪರಾಧಿಯ ಸಹವಾಸಕ್ಕೆ ಬೀಳುವ ಸಂಭವವಿದೆ ಎಂದು ನಂಬಲು ಸೂಕ್ತ ಕಾರಣಗಳಿದ್ದರೆ;
>
> ii) ಆತನನ್ನು ನೈತಿಕ, ದೈಹಿಕ ಅಥವಾ ಮಾನಸಿಕ ಅಪರಾಧಕ್ಕೀಡು ಮಾಡಿದರೆ;
>
> iii) ಆತನ ಬಿಡುಗಡೆಯಿಂದ ನ್ಯಾಯದ ಉದ್ದೇಶಗಳನ್ನು ವಿಫಲಗೊಳಿಸಿದಂತಾದರೆ."

13. ಪ್ರಸ್ತುತ ಮೊಕದ್ದಮೆಯಲ್ಲಿ, ಆರೋಪ ಪಟ್ಟಿಯ ಪ್ರಕಾರ, ಬಾಲಕನಾಗಿರುವ ಅರ್ಜಿದಾರನು ಈಗಾಗಲೇ ಕೆಟ್ಟ ವ್ಯಕ್ತಿಯಾದ 1ನೇ ಆರೋಪಿಯ ಸಹವಾಸಕ್ಕೆ ಬಿದ್ದಿದ್ದಾನೆ ಮತ್ತು ಆತನ ಅಂಥ ಸಹವಾಸದಿಂದ ಬರ್ಬರ ಕೃತ್ಯ ಎಸಗಲು ಕಾರಣವಾಗಿದೆ. ಇದು, ಬಾಲಕನು ಈಗಾಗಲೇ ತನಗೆ ಗೊತ್ತಿರುವ ಅಪರಾಧಿಯ ಸಹವಾಸದಲ್ಲಿದ್ದನು ಎಂಬ ಮೊದಲನೇ ಮಾನದಂಡವನ್ನು ಈಡೇರಿಸುತ್ತದೆ. ಇದಲ್ಲದೆ ಇದು, ನೈತಿಕ, ದೈಹಿಕ ಮತ್ತು ಮಾನಸಿಕ ಅಪಾಯಕ್ಕೆ ಗುರಿಯಾಗಬಹುದಾದ ವ್ಯಕ್ತಿಗಳ ಸಹವಾಸಕ್ಕೆ ಬೀಳುವ ಪ್ರವೃತ್ತಿಯನ್ನು ಅರ್ಜಿದಾರನು ಹೊಂದಿದ್ದಾನೆ ಅಥವಾ ಅಂಥ ಸಹವಾಸಕ್ಕೆ ಬೀಳುವ ಸಂಭವವಿದೆ ಎಂಬುದನ್ನು ತೋರಿಸುತ್ತದೆ.

14. "ನ್ಯಾಯದ ಉದ್ದೇಶಗಳನ್ನು ವಿಫಲಗೊಳಿಸುವ" ಎಂಬ ಪದಾವಳಿಯ ಅರ್ಥವೇನು ಎಂಬುದನ್ನು ಈ ಮೊಕದ್ದಮೆಯಲ್ಲಿ ಪರಿಗಣಿಸಬೇಕಾಗಿದೆ. ನ್ಯಾಯವು ನಿಷ್ಪಕ್ಷಪಾತತನವಲ್ಲದೆ ಮತ್ತೇನೂ ಅಲ್ಲ. ಈ ನಿಷ್ಪಕ್ಷಪಾತತನವು ಆರೋಪಿಗೆ ಮಾತ್ರವಲ್ಲದೆ, ಆರೋಪ ಮಾಡುವವನಿಗೆ ಮತ್ತು ಸಮಾಜಕ್ಕೆ ಸಹ ತೋರಿಸಬೇಕಾದ ನಿಷ್ಪಕ್ಷಪಾತತನವಾಗಿದೆ. ಅರ್ಜಿದಾರನಿಗೆ 17 ವರ್ಷಗಳಾಗಿದ್ದರೆ, ಆರೋಪ ಪಟ್ಟಿ ದಾಖಲೆಗಳ ಪ್ರಕಾರ 'ಎಕ್ಸ್' ವಯಸ್ಸು ಬಹಳವೆಂದರೆ 15 ವರ್ಷಗಳಾಗಿದೆ. ಆರೋಪ ಪಟ್ಟಿ ದಾಖಲೆಗಳ ಪ್ರಕಾರ, ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರವಾಗಿರುವುದಷ್ಟೇ ಅಲ್ಲದೆ, ಸದರಿ ಕೃತ್ಯವನ್ನು ವಿಡಿಯೋಗ್ರಾಫ್ ಮಾಡಲಾಗಿದೆ. ಈ ರೀತಿಯ ಮೊಕದ್ದಮೆಗಳು ನಿರ್ದಿಷ್ಟ ವ್ಯಕ್ತಿಯ ವಿರುದ್ಧದ ಅಪರಾಧ ಮಾತ್ರವಾಗಿರದೆ, ಸಮಾಜದ ವಿರುದ್ಧ ಅವರು ಮಾಡಿದ ಅಪರಾಧವೂ ಸಹ ಆಗಿದೆ.

15. ಮೇಲೆ ಉಲ್ಲೇಖಿಸಿದ ***ರಾಜು ಅಲಿಯಾಸ್ ಆಶಿಷ್*** ಮೊಕದ್ದಮೆಯಲ್ಲಿ, "ನ್ಯಾಯದ ಉದ್ದೇಶಗಳನ್ನು ವಿಫಲಗೊಳಿಸುತ್ತದೆ" ಎಂಬ ಪದಾವಳಿಯ ಅರ್ಥವಿವರಣೆ ನೀಡುವಾಗ, ಅಲಹಾಬಾದ್ ಉಚ್ಚ ನ್ಯಾಯಾಲಯವು ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:–

> "ಇನ್ನೊಂದು ರೀತಿಯಲ್ಲಿ ಹೇಳವುದಾದರೆ, ಈ ನ್ಯಾಯಾಲಯವು "ನ್ಯಾಯದ ಉದ್ದೇಶಗಳನ್ನು ವಿಫಲಗೊಳಿಸುವ" ಎಂಬ ಅಭಿವ್ಯಕ್ತಿಯಲ್ಲಿ, ಅಪ್ರಾಪ್ತನು ಎಸಗಿದ ಅಪರಾಧದ ಅಂತರ್ಗತ ಲಕ್ಷಣವನ್ನು ನಿರ್ಣಾಯಕವಾಗಿ ಅಲ್ಲದಿದ್ದಾಗ್ಯೂ ನಿಶ್ಚಿತವಾಗಿ ಸುಸಂಗತಗೊಳಿಸುವ ಮೂಲಕ, **ಕಾನೂನಿನೊಂದಿಗೆ ಸಂಘರ್ಷ ಹೊಂದಿರುವ ಅಪ್ರಾಪ್ತನ ತೀವ್ರ ಹಲ್ಲೆಯಿಂದ ಸ್ವತಃ ರಕ್ಷಿಸಿಕೊಳ್ಳಲು ಸಮಾಜಕ್ಕೆ ಅವಲಂಬನೆಯಾಗಿದೆ ಎಂಬ ವಿಷಯ ಕಂಡುಬಂದಿದೆ**."
>
> (ಒತ್ತು ನೀಡಲಾಗಿದೆ)

16. ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಈ ಮೇಲೆ ಉಲ್ಲೇಖಿಸಿದ ***ಓಂ ಪ್ರಕಾಶ್*** ಮೊಕದ್ದಮೆಯಲ್ಲಿ, "ನ್ಯಾಯದ ಉದ್ದೇಶಗಳನ್ನು ವಿಫಲಗೊಳಿಸುವ" ಎಂಬ ಪದಾವಳಿ ಬಗ್ಗೆ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:–

> **"ಹಾಗೆಯೇ, ಆರೋಪಿಯ ನಡತೆಯು ಅಥವಾ ಅಪರಾಧವನ್ನು ಎಸಗಿದ ವಿಧಾನ ಮತ್ತು ರೀತಿಯು, ನಿರಪರಾಧಿ ಬಾಲಕನಿಗಿಂತ ಹೆಚ್ಚಾಗಿ ಆರೋಪಿಯ ಪರಿಪಕ್ವ ಕೌಶಲ್ಯವನ್ನು ಸೂಚಿಸುವ ಆರೋಪಿಯು ಅಪರಾಧವನ್ನು ಎಸಗುವ ದುಷ್ಟತನವನ್ನು ಮತ್ತು ಚೆನ್ನಾಗಿ ಯೋಜಿಸಿ ಮಾಡಿದ ಸಂಚನ್ನು ಸೂಚಿಸುತ್ತಿದ್ದರೆ, ಆಗ ಆರೋಪಿಯ ವಯಸ್ಸಿನ ಸಮರ್ಥನೆಗೆ ಅವಲಂಬಿಸಬಹುದಾದ ದಸ್ತಾವೇಜೀಯ ಸಾಕ್ಷ್ಯ ಇಲ್ಲದಿರುವಲ್ಲಿ,** ಆರೋಪಿಯು ಪ್ರಾಪ್ತ ವಯಸ್ಕನೆಂದು ಸೂಚಿಸುವ ವೈದ್ಯಕೀಯ ಸಾಕ್ಷ್ಯವನ್ನು, **ಬಾಲ ನ್ಯಾಯ ಅಧಿನಿಯಮದ ಶಾಸನಾತ್ಮಕ ರಕ್ಷಣೆಯು ಕಾನೂನು ಉಲ್ಲಂಘಿಸುವ ನಿರಪರಾಧಿ ಅಪ್ರಾಪ್ತರನ್ನು ಉದ್ದೇಶಿಸಿದೆಯೇ ಹೊರತು, ಅಪ್ರಾಪ್ತ ವಯಸ್ಸಿನ ಕಾರಣವನ್ನು ಒಂದು ತಂತ್ರವಾಗಿ ಬಳಸುವ ಪರಿಪಕ್ವ ಮನಸ್ಸಿನ ಆರೋಪಿಯನ್ನಲ್ಲ** ಎಂಬ ನ್ಯಾಯ ಕ್ರಮವನ್ನು ಬುಡಮೇಲು ಮಾಡಿ, ಬಾಲ ನ್ಯಾಯ ಅಧಿನಿಯಮದಂಥ ಹಿತಚಿಂತಕ ಶಾಸನದ ತತ್ವವನ್ನು ಅವಲಂಬಿಸುವುದನ್ನು ನಿರ್ಲಕ್ಷಿಸಬೇಕೆಂದು ಅನುಮತಿಸಲಾಗುವುದಿಲ್ಲ."
>
> (ಒತ್ತು ನೀಡಲಾಗಿದೆ)

17. ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಮೇಲೆ ಹೇಳಿದ ತತ್ವಗಳನ್ನು ಗಮನದಲ್ಲಿರಿಸಿಕೊಂಡು, ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳು ಅವಲಂಬಿಸಿದ ತೀರ್ಪುಗಳನ್ನು ಅನುಸರಿಸಲಾಗುವುದಿಲ್ಲ. ಸಮಾಜವನ್ನು ನಿರ್ಲಕ್ಷಿಸಿ ಕಾನೂನಿನೊಂದಿಗೆ ಸಂಘರ್ಷ ಹೊಂದಿರುವ ಮಗುವಿನ ಪ್ರಯೋಜನಕ್ಕಾಗಿ ಮಾತ್ರವೇ ಅಧಿನಿಯಮದ

3ನೇ ಮತ್ತು 12ನೇ ಪ್ರಕರಣಗಳಿವೆ ಎಂಬ ಅವುಗಳ ಮೇಲಿನ ಅವರ ಅರ್ಥವಿವರಣೆಯನ್ನು ಒಪ್ಪಿಕೊಳ್ಳಲಾಗುವುದಿಲ್ಲ.

18. ಈ ನ್ಯಾಯಾಲಯಕ್ಕೆ ವಿಚಾರಣಾ ನ್ಯಾಯಾಲಯಗಳ ಆದೇಶಗಳಲ್ಲಿ ಯಾವುದೇ ಕಾನೂನುಬಾಹಿರತೆ ಅಥವಾ ಅಸ್ಥಿರತೆ ಕಂಡುಬಂದಿರುವುದಿಲ್ಲ. ಅರ್ಜಿಯನ್ನು ವಜಾಗೊಳಿಸಲಾಗಿದೆ.